ಆಧಾರವಾಗಿತ್ತು. ಅಂದಿನ ಸುಂದರ ಉದ್ಯಾನದ ಕುರಿತು ರಾಯಲ್ ಏಷ್ಯಾಟಿಕ್ ಸೊಸೈಟಿ ಪತ್ರಿಕೆಯು **'The village Chitra vadiga is a corruption Chitravatica meaning a beautiful garden. It is said that the place was a suburb of Vijayanagara and was founded by Krishnaraya for the recreation of his wifequeen Tirumala'** ಎಂದು ಉಲ್ಲೇಖಿಸಿದೆ.

ಇಂದು ಚಿತ್ರವಾಟಿಕಾ ಉದ್ಯಾನ ನಾಮಾವಶೇಷವಾಗಿದೆ. ಅದರ ಕುರುಹುಗಳೂ ಇಲ್ಲ. ಅಂತಹದೊಂದು ಉದ್ಯಾನವಿತ್ತು ಎಂಬ ನೆನಪೇ ಯಾರಿಗೂ ಇಲ್ಲದಿರುವುದು ಮತ್ತೊಂದು ಕಹಿ ಸತ್ಯ. ಕಾಲಾಂತರದಲ್ಲಿ ಜನರ ಬಾಯಲ್ಲಿ ಚಿತ್ತವಾಡಿಗಿಯಾಗಿರುವ ಪ್ರದೇಶ ಇಂದು ಹೊಸಪೇಟೆಯಲ್ಲಿಯೇ ಅತ್ಯಂತ ಹಿಂದುಳಿದ ವಾಸಸ್ಥಳ ಬಡಾವಣೆ ಎನ್ನಬಹುದು. ಕೊಳಕು, ಬಯಲು ಬಹಿರ್ದೆಸೆ, ಸೌಲಭ್ಯಗಳ ಕೊರತೆಯ ಬಡಾವಣೆಯದು.

## ಚಿನ್ನಾದೇವಿಯ ನಾಗಲಾಪುರ

ತನ್ನ ಎರಡನೇ ಪತ್ನಿ ಚಿನ್ನಾದೇವಿಗಾಗಿ ಹೊಸಪೇಟೆಗೆ ಕೆಲವೇ ಮೈಲಿ ದೂರದಲ್ಲಿ ಕೃಷ್ಣದೇವರಾಯ ನಾಗಲಾಪುರವನ್ನು ಕಟ್ಟಿದ. ನಾಗಲಾಪುರವನ್ನು ಆತನ ತಾಯಿ ನಾಗಲಾಂಬಿಕೆಯ ನೆನಪಿಗೆ ಕಟ್ಟಲಾಯಿತು ಎಂದು ಕೆಲವು ಇತಿಹಾಸಕಾರರು ಹೇಳುತ್ತಾರೆ. ಇಂದು ನಾಗೇನಹಳ್ಳಿ ಎಂದು ಕರೆಸಿಕೊಳ್ಳುವ ನಾಗಲಾಪುರ ನೀರಾವರಿ ದೃಷ್ಟಿಯಿಂದ ಅತ್ಯಂತ ಆಯಕಟ್ಟಿನ ಗ್ರಾಮ. ವಿಜಯನಗರದ ಅರಸರು ತುಂಗಭದ್ರಾ ನದಿಗೆ ನಿರ್ಮಿಸಿದ 'ರಾಯ', 'ಕಾಳಘಟ್ಟ' ಹಾಗೂ 'ಬೆಲ್ಲ' ಕಾಲುವೆಗಳು ಈ ಗ್ರಾಮದ ಮಾಗಾಣಿ ವ್ಯಾಪ್ತಿಯಲ್ಲಿ ಹರಿಯುತ್ತವೆ. ವರ್ಷದ ಬಹುತೇಕ ಕಾಲ ನೀರು ಲಭ್ಯ. ಸಮೃದ್ಧ ಭತ್ತ, ಕಬ್ಬು ಬೆಳೆಯುತ್ತಾರೆ. ಇಲ್ಲಿ ಬೆಳೆಯುವ ಫಸಲಿನಿಂದ ಹಂಪಿ ವಿರೂಪಾಕ್ಷನಿಗೆ ನಿತ್ಯ ಪೂಜೆಯಾಗಲಿ ಎಂದು 1521ರಲ್ಲಿ ಕೃಷ್ಣದೇವರಾಯ ಶಾಸನ ಹಾಕಿಸಿದ ದಾಖಲೆಗಳಿವೆ.

ಚಿನ್ನಾದೇವಿ ರಾಯನಿಗೆ ಅತಿ ಪ್ರೀತಿಯ ಮಡದಿ. ಅವಳಿಗಾಗಿ ಗ್ರಾಮದಲ್ಲಿ ಸುಂದರವಾದ ಅರಮನೆ ಇತ್ತು ಎನ್ನುತ್ತವೆ ದಾಖಲೆಗಳು. ಆದರೆ ಇಂದು ಗ್ರಾಮದಲ್ಲಿ ರಂಗನಾಥಸ್ವಾಮಿ ದೇವಾಲಯ ಹಾಗೂ ಗ್ರಾಮಕ್ಕೆ ಸ್ವಲ್ಪ ದೂರದಲ್ಲಿ ಶಿವಾಲಯವನ್ನು ಬಿಟ್ಟರೆ ಚಿನ್ನಾದೇವಿ ನೆನಪಿಗಾಗಲೀ ಅಥವಾ ರಾಯನ ತಾಯಿಯ ನೆನಪಿಗಾಗಲೀ ಯಾವ ಸ್ಮಾರಕವೂ ಇಲ್ಲ.

## ಅನಂತಶಯನ ಗುಡಿ

ಹೊಸಪೇಟೆಗೆ ಕೇವಲ ಮೂರು ಕಿ.ಮೀ. ದೂರದಲ್ಲಿರುವ, ಈಗ ಬಹುತೇಕ ಹೊಸಪೇಟೆಯ ಭಾಗವೇ ಆಗಿರುವ ಅನಂತಶಯನಗುಡಿ, ರಾಯನ ಅವಧಿಯಲ್ಲಿ ಕಟ್ಟಲಾದ ಮತ್ತೊಂದು ಮಹಾ ಹೆಗ್ಗುರುತು ಎನ್ನಬಹುದು. ತನ್ನ ಒಂಬತ್ತನೇ ವಯಸ್ಸಿಗೇ ಅಕಾಲ ಮರಣಕ್ಕೆ ತುತ್ತಾದ ಮಗ ತಿರುಮಲನ ನೆನಪಲ್ಲಿ ಈ ಗ್ರಾಮ ಹಾಗೂ ಅನಂತಪದ್ಮನಾಭ ದೇವಾಲಯ ನಿರ್ಮಿಸಲಾಗಿದೆ. ಹಿಂದೆ ಅದಕ್ಕೆ 'ಸಾಲೆತಿರುಮಲರಾಯ ಪುರ' ಎಂಬ ಹೆಸರಿತ್ತು. ಶಾಸನದಲ್ಲಿಯೂ ಇದು ಉಲ್ಲೇಖಿತ. ಇದು 1525ರಲ್ಲಿ ನಿರ್ಮಾಣವಾಗಿದ್ದು, ವಿಜಯನಗರದ ಉಳಿದ ದೇವಾಲಯಗಳಿಗಿಂತ ಭಿನ್ನವಾದ ಶೈಲಿಯಲ್ಲಿದೆ. ಬೃಹದಾಕಾರದ ಮಹಾದ್ವಾರ, ಕಲ್ಯಾಣಮಂಟಪ, ಎಡಬಲ ಭಾಗಗಳಲ್ಲಿ ಪುಟ್ಟ ದೇವಾಲಯಗಳು, ಕಲ್ಯಾಣಿಗಳು, ಸುಟ್ಟ ಇಟ್ಟಿಗೆಯ ರಕ್ಷಣಾ ಗೋಡೆ ಇತ್ಯಾದಿಗಳಿರುವ ಈ ದೇವಾಲಯವೊಂದು ದೊಡ್ಡ ಸಂಕೀರ್ಣ.

ಹಂಪಿಗೆ ಸಾವಿರಾರು ಪ್ರವಾಸಿಗರು ಬಂದರೂ ಹೆಚ್ಚು ಜನ ಭೇಟಿ ಕೊಡದ ಸ್ಮಾರಕವೆಂದರೆ ಅನಂತಶಯನಗುಡಿಯ ಈ ದೇವಾಲಯ. ಹೊಸಪೇಟೆ – ಹಂಪಿ ರಸ್ತೆ ಪಕ್ಕದಲ್ಲೇ ಇದ್ದರೂ ಕಿಕ್ಕಿರಿದ ಮನೆಗಳು ಹಾಗೂ ಅಂಗಡಿ ಸಾಲುಗಳಿಂದಾಗಿ ಇದು ಸುಲಭವಾಗಿ ಕಣ್ಣಿಗೆ ಕಾಣುವುದಿಲ್ಲ. ನಾಗೇನಹಳ್ಳಿಯಿಂದ ಬರುವಾಗ ಇದರ ಗೋಪುರ ಕಾಣುತ್ತದೆ. ಗರ್ಭಗುಡಿಯಲ್ಲಿ ವಿಗ್ರಹವಿಲ್ಲ. ಅದಕ್ಕೆ ಸ್ಥಳೀಯರು ಒಂದು ಕಥೆ ಹೇಳುತ್ತಾರೆ. ಏನೆಂದರೆ:

ವಿಗ್ರಹಗಳನ್ನು ತರುತ್ತಿರುವಾಗ ತಾಳಿಕೋಟೆ ಯುದ್ಧ ಶುರುವಾಗಿ ವಿಜಯನಗರದ ಸೈನ್ಯ ಸೋಲುತ್ತದೆ. ಆ ವರ್ತಮಾನವನ್ನು ಮಾರ್ಗಮಧ್ಯದಲ್ಲಿಯೇ ತಿಳಿದು ವಿಗ್ರಹವನ್ನು ಹೂವಿನಹಡಗಲಿ ಹತ್ತಿರದ ಹೊಳಲು ಗ್ರಾಮದಲ್ಲಿಯೇ ಬಿಟ್ಟು ಹೋಗುತ್ತಾರೆ. ಆ ಗ್ರಾಮದ





ಬಸವಣ್ಣ ಕಾಲುವೆ



ಅನಂತಶಯನ ಮಂದಿರ



'ರಾಯ ಕೆರೆ' ಜಲಾನಯನ ಪ್ರದೇಶ